ಅಧ್ಯಕ್ಷರು :– ಶ್ರೀ ಆರ್ಮುಗಂರವರು ಅಡ್ಜರನ್ಮೆಂಟ್ ಮೋಷನ್ ಕೊಟ್ಟಿದ್ದೇನೆ ಎಂದು ಹೇಳಿದರು. ಫೈಲ್ ತರಿಸಿ ನೋಡಿಸಿದೆ. ರೂಲ್ ೧೪೬ ೨೬ ಹೀಗೆ ಹದಿವಾರು ರೂಲ್ಸ್ ಕೆಳಗೆ ಹಲವಾರು ನೋಟೀಸ್‌ನ್ನು ಕೊಟ್ಟಿದ್ದಾರೆ. ಅವರು ಹೇಳಿದ ಹಾಗೆ ಲೇಬರ್ ಮಿನಿಷ್ಟರು ಬಂದು ತೊಂದರೆಯಾಯಿತು ಎಂದು ರೂಲ್ ೨೭೯ ಪ್ರಕಾರ ನೋಟೀಸ್ ಕೊಟ್ಟಿದ್ದಾರೆ. ಒಸ್‌ರೂಟ್ಸ್ ನ್ಯಾಷನಲೈಜೇಷನ್ ವಿಚಾರ ರೂಲ್ ೧೪೬ ಕೆಳಗೆ ನೋಟೀಸ್ ಕೊಟ್ಟಿದ್ದಾರೆ. ಹೋಲ್‌ಸೇಲ್ ಫುಡ್‌ಪ್ರೈಸಸ್ ವಿಚಾರದಲ್ಲಿ ನೋಟೀಸ್ ಕೊಟ್ಟಿದ್ದಾರೆ ಇದು ಅನೇಕವೇಳೆ ಚರ್ಚೆಯಾಯಿತು. ರೂಲ್ ೧೪೬ ಮೇಲೆ ನ್ಯಾಷಲೈಷೇಸನ್ ಆಫ್ ಗೋಲ್ಡ್ ಮೈನ್ಸ್ ಬಗ್ಗೆ ನೋಟೀಸ್ ಕೊಟ್ಟಿದ್ದಾರೆ. ಅದು ಗೌರ್ನಮೆಂಟಿಗೆ ಸಂಬಂಧ ಬರುವುದಿಲ್ಲ. ನಮ್ಮ ಹತ್ತಿರ ಬಂದಿರುವ ಎಷ್ಟೋ ನೋಟೀಸಸ್ ಬಗ್ಗೆ ಈಗೆ ಏನಾಗಿದಯೆಂದರೆ ೮೬ ಕಾಲ್ ಅಟೆನ್‌ಷನ್ ನೋಟೀಸ್ ಬಂದಿವೆ. ಅವುಗಳಲ್ಲಿ ಳಳನ್ನು ಅಟ್ಟಿಟ್ ಮಾಡಿದ್ದೇವೆ. ಅವುಗಳ ಪೈಕಿ ೨೫ ಈಗಾಗಲೇ ಆನ್ಸರ್ ಆಗಿ ಹೋಗಿವೆ. ಇನ್ನು ಇರುವುವು ೧೯ ಪೆಂಡಿಂಗ್‌ಯಿವೆ. ಮಾನ್ಯ ಸದಸ್ಯರು ಯಾವಾಗಲೂ ಕಾಲಿಂಗ್ ಅಟೆನ್ಷನ್ನು ಕಳುಹಿಸುವಾಗ ಯಾವುದು ಅತಿಮುಂಖ್ಯ ಎಂದು ತಿಳಿದಮೇಲೆ ಅದನ್ನು ಕಳುಹಿಸಿದರೆ ಅದಕ್ಕೆ ಉತ್ತರ ತರಿಸುವುದಕ್ಕೆ ಸರಿಹೋಗುತ್ತದೆ. ಒಂದೇ ಸಮ ಕಂಡಕಂಡಹಾಗೆ ಕಾಲಿಂಗ್ ಅಟೆನ್‌ಷನ್ ಕಳುಹಿಸಿದರೆ ತೆಗೆದುಹಾಕುವ ಸಂದರ್ಭದಲ್ಲಿ ಯಾವುದು ಮುಂಖ್ಯ ಆಗಿರುತ್ತದೆ ಅದು ಹೊರಟು ಹೋಗಬಹುದು. ಆದುದರಿಂದ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸುವಾಗ ಪ್ರಾಮುಖ್ಯತೆ ನೋಡಿಕೊಂಡು ಕಳುಹಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ, ಬಾಕಿ ಸಬ್ಜೆಕ್ಟ್‌ಸ ಮುಂದಕ್ಕೆ ಬರುತ್ತಿದೆ ದಯಮಾಡಿ ಆ ವಿಚಾರ ಎತ್ತಬೇಡಿ ಎಂದು ಹೇಳುತ್ತೇನೆ.

MR. C. M. ARMUGAM :– Members privilage of giving calling attention notices can not be curtailed.

MADAM SPEAKER.– If you select proper calling attention notices it will be helpful to me also.

Notice of Privilege Notice regarding Supersession of the Bangalore City Corporation.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ) ರೂಲ್ ೧೭೭ ಮತ್ತು ೧೭೮ನೇ ನಿಯಮಾವಳಿ ಪರಿಮಿತಿಯಲ್ಲಿ ಒಂದು ಪ್ರಿವಿಲೇಜ್ ಮೋಷನ್‌ನ್ನು ಸಭೆಯಮುಂದೆ ತರಲು ಅಪ್ಪಣೆ ಕೊಡಬೇಕೆಂದು ನೋಟೀಸ್ ಳಿಸಿಕೊಟ್ಟಿದೆ. ಆ ವಿಷಯವಾದರೂ ಇಷ್ಟೆ: ಮೊನ್ನೆ ೧೭ನೇ ತಾರೀಖು ಈ ಸಭೆಯಲ್ಲಿ ಶ್ರೀಮಾನ್ ಟಿ. ಆರ್ ಶಾಮಣ್ಣನವರು ಮುಂಡಿಸಿದಂತಹ ಖಾಸಗಿ ನಿರ್ಣಯದ ಮೇಲೆ ಸಭೆಯಲ್ಲಿ ಚರ್ಚೆ ಆದಾಗ ಶ್ರೀಮಾನ್ ನಾಗಣ್ಣನವರು ಕೂಡ ಪ್ರಸ್ತಾಪಮಾಡಿದ್ದಾರೆ, ಸರ್ಕಾರದ ಪರವಿಂದ ಶ್ರೀಮಾನ್ ಚೆನ್ನಬಸಪ್ಪನವರು ಉತ್ತರ ಕೊಟ್ಟಿದ್ದಾರೆ ಕಾರ್ಪೊರೇಷನ್ ರದ್ದು ಮಾಡುವುದಕ್ಕೆ ಕಾಲ ಪಕ್ವವಾಗಿದೆ ಎಂದೂ ಮೇಲ್ಮನೆಯಲ್ಲಿ ಶ್ರೀ ಮಾನ್ ಬಸವಲಿಂಪ್ಪನವರು ಉತ್ತರಕೊಟ್ಟಿದ್ದಾರೆ. ಅದಕ್ಕೆ ೧೮ನೇ ತಾರೀಖು ಕಾರ್ಪೊರೇಷನ್ ಸಭೆ ನಡೆದು ಆ ಸಭೆಯಲ್ಲಿ ೧೭ನೇ ತಾರೀಖು ಶನಿವಾರ ಏನು ಪ್ರಸ್ತಾಪ ಆಗಿತ್ತು ಆ ವಿಷಯದ ಬಗ್ಗೆ ... ...

ಅಧ್ಯಕ್ಷರು :–ನೋಟೀಸ್ ಕೊಟ್ಟಿದ್ದರೆ ಡಾಕ್ಯೂಮೆಂಟ್ಸ್ ಅಟ್ಯಾಚ್ ಮಾಡಿಲ್ಲ.

ಶ್ರೀ ಎಚ್. ಡಿ. ದೇವೇಗೌಡ :– ನನ್ನ ಹತ್ತಿರ ಡಾಕ್ಯೂಮೆಂಟ್ ಇರುತ್ತದೆಯೇ ? ಅದನು ಕಾರ್ಪೊರೇಷನ್ ಆಫೀಸಿನಿಂದ ತರಿಸಿಕೊಳ್ಳಬೇಕಾಗುತ್ತದೆ. ನಾನು ಏನು ಡಾಕ್ಯೂಮೆಂಡ್ಸ್ ಕೊಡಲಿ ? ಎಲ್ಲಿಯವರೆಗೆ ಹೋಗಿದ್ದಾರೆ ಎಂದರೆ ಮಂತ್ರಿಗಳು ಕಾರ್ಪೊರೇಷನ್ ರದ್ದುಮಾಡುವುದಕ್ಕೆ ಕಾಲ ಪಕ್ವವಾಗಿದೆ ಎಂದು ಹೆಳಿರತಕ್ಕ ಬಗ್ಗೆ ಮಂತ್ರಿಗಳನ್ನು ಕುರಿತು ಅವರು ಹೇಳಿದ್ದಾರೆ ಎಂದು ನನ್ನ ಬಾವನೆ. ಹುಚ್ಚನ ಕೈಗೆ ದೊಣ್ಣೆ ಕೊಟ್ಟಹಾಗೆ ಆಗಿದೆ, ಧಿಡೀರ್ ಲಕ್ಷಾಧೀಶ್ವರಾಗುತ್ತಾರೆ ಎಂದು ಮಾನ್ಯ ಸದಸ್ಯರು ವ್ಯಕ್ತಪಡಿಸುತ್ತಾ ಇರುವ ಕಾಲದಲ್ಲಿ ಕಾರ್ಪೊರೇಟರ್ಸ್ ಲಕ್ಷಾಧೀಶ್ವರ ಹೇಗೆ ಆಗುವುದು ಎಂದು ಹೇಳುತ್ತಿದ್ದಾರೆಂದರೆ ಟ್ರಸ್ಟ್ ಬೋರ್ಡ್ ಏರಿಯ ಡಿನೋಟಿಫೈ ಮಾಡಿಸಿ ಆದಮೆಲೆ ಆ ಏರಿಯಾದಲ್ಲಿ ಒಂದು ಸಹಕಾರಸಂಘ ಮಾಡಿ ಮನೆ ಕಟ್ಟಿಕೊಂಡರೆ ಆಗಬಹುದೆ ಏನೋ ಎಂದು ಹೇಳಿದ್ದಾರೆ. ಆದರಬಗ್ಗೆ ಇಲ್ಲಿ ಮಾತನಾಡಿರುವವರು ಶ್ರೀಮಾನ್ ನಾಗಣ್ಣನವರು ಮತ್ತು ಶ್ರೀಮಾನ್ ಟಿ. ಆರ್. ಶಾಮಣ್ಣನವರು ಮತ್ತು ಮಂತ್ರಿಗಳು. ಇದರೊಳಗೆ ಟ್ರಸ್ಟ್‌ಬೋರ್ಡ್ ಆಸ್ತಿಯನ್ನು ನೋಟಿಫೈ ಮಾಡತಕ್ಕಂಥದ್ದನ್ನು ಡಿನೋಟಿಫೈ ಮಾಡಿದ ಮೇಲೆ ಅಕ್ರಮವಾಗಿ ಹಣ ಸಂಪಾದನೆ ಮಾಡುವುದಕ್ಕೆ ಯಾರಾರು ಪ್ರಯತ್ನಪಟ್ಟರೊ ಗೊತ್ತಿಲ್ಲ?

ಮಾನ್ಯ ಸದಸ್ಯರುಗಳು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ವ್ಯಕ್ತಿ ಚರಿತ್ರೆಗೆ ಎಂಸಿ ಬಳಿಯುವುದಕ್ಕೆ ಪ್ರಯತ್ನ ಮಾಡಬಾರದು.

4.30 P. M.

ದಿಢೀರ್ ಲಕ್ಷಾಧೀಶ್ವರರಾಗುತ್ತಾರೆ ಎನ್ನುವ ಪದವನ್ನು ಪ್ರಯೋಗ ಮಾಡಿದ್ದಾರೆ. ಹೇಗೆ ಆಗುತ್ತಾರೆ ಎನ್ನುವ ಬಗ್ಗೆ ಅವರು ವಿವರಣೆ ಕೊಡುತ್ತಾ "ಟ್ರಸ್ಟ್‌ಬೋರ್ಡು ನೋಟಿಫೈಡ್ ಏರಿಯಾವನ್ನು ಡಿನೋಟಿಫೈ ಮಾಡಿಸಿ ಒಂದು ಸಹಕಾರ ಸಂಘವನ್ನು ಸಹ ಮಾಡಿಕೊಂಡು ಮನೆ ಕಟ್ಟಿಕೊಂಡರೆ ಲಕ್ಷಾಧೀಶ್ವರರಾಗ ಬಹುದೋ ಏನೋ" ಎಂದು ಹೇಳುತ್ತಾ ಅದಾದಮೇಲೆ ಕಾರ್ಪೊರೇಷನ್‌ಅನ್ನು ರದ್ದು ಮಾಡುವುದಕ್ಕೆ ಕಾಲ ಪಕ್ವವಾಗಿದೆ ಎನ್ನುವುದಕ್ಕೆ " ನೋಡೋಣ ನಾವೆಲ್ಲ ಲಂಚಕೋರರು ಎಂದು ಮಾತನಾಡಿದ್ದಾರೆ. ಸರ್ಕಾರ ದವರು ನಿರಾಕರಣೆಕೂಡ ಮಾಡಿಲ್ಲ" ಎಂದು ಅಲ್ಲಿಯ ಸದಸ್ಯರು ಹೇಳಿದ್ದಾರೆ " ಮುಂದೆ ಕಾರ್ಪೊರೇಷನ್ ಮೇಲೆ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿರುವ ಪೂರ್ವಭಾವಿ ಕ್ರಮಗಳು" ಎಂದೂ ಅವರು ಹೇಳಿದ್ದಾರೆ. ಅದಕ್ಕೆ ಮಾನ್ಯ ಮೇಯರ್ ಅವರು " ಇನ್ನೂ ೮-೧೦ ದಿವಸ ಕಾಯಿರಿ ಕೆಲವರಿಗೆ ಹುಚ್ಚು ಹಿಡಿದಿದೆ, ಅಧಿಕಾರ ಕೊಟ್ಟಿರುವುದು ಹುಚ್ಚರಕೈಗೆ ದೊಣ್ಣೆ ಕೊಟ್ಟಂತಾಗಿದೆ. ರಾಜ್ಯದ ಎಲ್ಲಾ ಪುರಸಭೆಗಳನ್ನು ಸರ್ಕಾರಕ್ಕೆ ವಹಿಸಿಕೊಳ್ಳಲು ಅವರು ಇಳಿಯಬೇಕಾಗುತ್ತದೆ ಇಳಿದ ಮೇಲೆ ಗೊತ್ತಾಗುತ್ತದೆ, ಹುಚ್ಚಾಟಕ್ಕೆ ಅವಕಾಶ ಕೊಡಬೇಡಿ ಎಂದು ಮುಖ್ಯಮಂತ್ರಿಗಳಿಗೆ ತಿಳಿಸೋಣ" ಎಂದು ಮೇಯರ್ ಅವರು ಹೇಳಿದ್ದಾರೆ. "೮-೧೦ ದಿವಸದಲ್ಲಿ ಅವರು ಅಧಿಕಾರದಲ್ಲಿ ಇರುತ್ತಾರೆಯೇ" ಎನ್ನುವ ಪ್ರಶ್ನೆ ಮಾಡಿದ್ದಾರೆ. "ಮಹಮದ್ ಬಿನ್ ತೊಗಲಕ್‌ನ ಆಡಳಿತ " ಎಂದು ಹೇಳುತ್ತಾ ಹಲವಾರು ವಿಷಯ ಪ್ರಸ್ತಾಪ ಮಾಡಿದ್ದಾರೆ. ಈ ಸಭೆಯಲ್ಲಿ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುವುದು ಇಷ್ಟೆ, ಮುನಿಸಿಪಲ್ ಆಡ್ಮಿನಿಸ್ಟ್ರೇಷನ್ ಮಂತ್ರಿಗಳ ಬಗ್ಗೆ ಇನ್ನೂ ಕೆಲವು ಆಪಾದನೆಗಳನ್ನು ಮಾಡಿದ್ದಾರೆ. " ಇದೇ ಸಚಿವರು ಕಾರ್ಪೊರೇಷನ್ ಸದಸ್ಯರಾಗಿದ್ದಾಗ ಖಾಲಿ ನಿವೇಶನ ಪಡೆದುಕೊಂಡಿದ್ದಾರೆ " ಎಂದು ಹಲವಾರು ಆಪಾದನೆಗಳನ್ನು ಕೂಡ ಕಾರ್ಪೊರೇಷನ್ ಸಭೆಯಲ್ಲಿ ಮಾಡಿದ್ದಾರೆ. ಈ ವಿಷಯವನ್ನು ವಿತಕ್ಕೆ ಪ್ರಸ್ತಾಪ ಮಾಡುತ್ತೇನೆ ಎಂದರೆ, ಈ ಸಭೆಯಲ್ಲಿ ನಮ್ಮ ಕರ್ತವ್ಯಗಳನ್ನು ನಿರ್ವಹಣೆ ಮಾಡತಕ್ಕ ಕಾಲದಲ್ಲಿ ನಾವು ಹೆಲವಾರು ವಿಷಯಂಗಳನ್ನು ಪ್ರಸ್ತಾಪ ಮಾಡುತ್ತೇವೆ. ಒಂದು ವೇಳೆ ಈ ಸಭೆಯ ನಿಯಮಾವಳಿಗಳ ವಿರುದ್ಧವಾಗಿ ಕಾರ್ಯಕಲಾಪಗಳಲ್ಲಿ ಭಾಗವಹಿಸಿದರೆ ಅದು ಸರಿಯಲ್ಲ ಎಂದು ರೂಲಿಂಗ್ ಕೊಡತಕ್ಕ ಅಧಿಕಾರ ತಮಗೆ ಇದೆ. ಈ ಸಭೆಯಲ್ಲಿ ನಡೆಯತಕ್ಕ ಕಾರ್ಯಕಲಾಪದ ಹಿನ್ನೆಲೆ, ಯಾರಾದರೂ ಈ ಸಭೆಯ ಸದಸ್ಯರ ಬಗ್ಗೆ, ಅವರ ವ್ಯಕ್ತಿತ್ವಕ್ಕೆ ಕಳಂಕವನ್ನು ಹಾಕುವ ರೀತಿಯಲ್ಲಿ ಆಪಾದನೆ ಮಾಡಲು ಅಥವಾ ಧಿಕ್ಕರಿಸುವ ರೀತಿಯಲ್ಲಿ ಮಾತನಾಡಲು ಆಸ್ಪದವಿಲ್ಲ, ಹಾಗೆ ಮಾಡುವುದಾದರೆ, ನಾವು ಈ ಸಭೆಯಲ್ಲಿ ಕೆಲಸ ಮಾಡುವುದು ಕಷ್ಟವಾಗುತ್ತದೆ. ಈ ವಿಷಯ ಬಹಳ ಗಹನವಾದುದು, ಮಂತ್ರಿಗಳು ಟ್ರಸ್ಟ್‌ಬೋರ್ಡು ನೋಟಿಫೈಟ್ ಏರಿಯಾ ಅನ್ನು ಡಿ ನೋಟಿಫೈ ಮಾಡಿಸಿ, ಆಕ್ರಮವಾಗಿ ಹಣವನ್ನು ಸಂಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ? ಅಥವಾ ಆ ಕಡೆ ಯಾವ ಸದಸ್ಯರು ಖಾಸಾಗೀ ಚರ್ಚೆಯಾದಾಗ, ಯಾರು ಆರೋಪಣೆ ಮಾಡಿದ್ದಾರೋ ಅವರು ಇದರಲ್ಲಿ ಭಾಗಿಯಾಗಿದ್ದರೆ ವಿಚಾರಣೆ ಮಾಡಬೇಕಾಗುತ್ತದೆ. ಇದು ಸಾಮಾನ್ಯ ಆರೋಪಣೆ ಅಲ್ಲ, ಗುರುತರವಾದ ಆರೋಪಣೆ. ಈ ಸಭೆಯ ಸದಸ್ಯರ ಮೇಲೆ ಆಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಾವು ಈ ಸಭೆಯಲ್ಲಿ ಕೆಲಸ ಮಾಡುವುದಕ್ಕೆ ಯಾವುದೇ ತರಹ ಅಡಚಣೆಯಾಗಬಾರದು. ಈ ಸಭೆಯು ನಿಯಮಾವಳಿಗಳನ್ನು ಬಿಟ್ಟು ಹೋಗುವುದಾದರೆ ಅದನ್ನು ತಿದ್ದತಕ್ಕ ಸರ್ವ ಅಧಿಕಾರ ತಮಗೆ ಇದೆ. ಈ ಸಂದರ್ಭದಲ್ಲಿ ಕಾರ್ಪೋರೇಷನ್ ಸಭೆಯಲ್ಲಿ ಅಂದು ನಡೆದಂಥ ನಡವಳಿಕೆ ಏನು ಇದೆ ಅದನ್ನು ತರಿಸಿ, ಪರಿಶೀಲನೆಮಾಡಿಸಿ, ಅದರ ಬಗ್ಗೆ ತಾವು ಒಂದು ನಿರ್ಣಯ ಕೊಡಬೇಕು ಎಂದೂ ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಮಟಾಳ್ ನಾಗರಾಜ್ — (ಚಾಮರಾಜಪೇಟೆ) : ಈ ಸಭೆಯ ಸದಸ್ಯರ ಗೌರವ ಘನತೆಯ ಬಗ್ಗೆ ಕಾರ್ಪೊರೇಷನ್ ಸಭೆಯಲ್ಲಿ ಮಾತನಾಡುವುದಕ್ಕೆ ಪ್ರಾರಂಭಮಾಡಿದಾಗ, ಶಾಸನಸಭೆಯಲ್ಲಿ ಮಾತನಾಡುವ ವಿಚಾರಗಳ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ದಯವಿಟ್ಟು ಆ ವಿಚಾರಗಳನ್ನು ಮಾತನಾಡಬಾರದು ಎಂದು ಮೇಯರ್ ಅವರಲ್ಲಿ ಮನವಿ ಮಾಡಿಕೊಂಡೆ. ಈ ಮಾತನ್ನು ನಾನು ಹೇಳುವುದಕ್ಕೆ ಮುಂಚಿತವಾಗಿ ಅವರು ಸ್ಥಳೀಯ ಸಚಿವರ ಬಗೆ ತಮ್ಮ ಇಚ್ಛೆಗೆ ಬಂದರೀತಿ ಮಾತನಾಡಿದರು. "ಅವರು ಯಾರು ನಮ್ಮ ಕಾರ್ಪೊರೇಷನ್ ಅನ್ನು ಸೂಪರ್‌ಸೀಡ್ ಮಾಡುವುದಕ್ಕೆ" ? "ಅವರು ಎಷ್ಟು ದಿವಸ ಉಳಿಯತ್ತಾರೆ. ಅವರು ಉಳಿಯುತ್ತಾರೆಯೋ ನಾನು ಉಳಿಯುತ್ತೇವೆಯೇ ? ಹುಚ್ಚನ ಕೈಯಲ್ಲಿ ದೊಣ್ಣೆಯನ್ನು ಕೊಟ್ಟಂತಾಗಿದೆ, ಅವರಿಗೆ ಅಧಿಕಾರ ಕೊಟ್ಟಿರತಕ್ಕದ್ದು" ಎನ್ನತಕ್ಕ ದಾಟಿಯಲ್ಲಿ ಮಾತನಾಡಿದರು. ನಾನು ಮನವಿ ಮಾಡಿಕೊಂಡೆ, ಈ ಶಾಸನ ಸಭೆಯಲ್ಲಿ ನಡೆದಂಥ ವಿಷಯದಲ್ಲಿ ಚರ್ಚೆ ಮಾಡುವುದಕ್ಕೆ ನಿಮಗೆ ಅಧಿ

(ಶ್ರೀ ವಾಟಾಳ್ ನಾಗರಾಜ್)

ಕಾರವಿಲ್ಲ ಎಂದು. ಡೈರೆಕ್ಟ್‌ಆಗಿ ಹೆಸರು ಹೇಳುತ್ತಾ ಇರಲಿಲ್ಲ, ಮಂತ್ರಿಗಳು, ಶಾಸಕರಾಗಿ ಬರಬೇಕು ಎನ್ನುವ ರೀತಿ ಕುಚೋದ್ಯ ಮಾಡಿ ಮೇಯರ್ ಅವರು ಎರಡು ಗಂಟೆಗಳ ಕಾಲ ಚರ್ಚೆ ಮಾಡಿದ್ದಾರೆ. ನಾನು ಪದೇ ಪದೇ ಹೇಳಿದೆ. ಇದು ಸತ್ಸಂಪ್ರದಾಯವಲ್ಲ ಎಂದು. ಆದರೂ ಅವರು ಈ ಸಭೆಯನ್ನು ಹಾಸ್ಯಾಸ್ಪದವಾಗಿ ಕಂಡಿದ್ದಾರೆ. ಆದ್ದರಿಂದ ತಾವು ಅವರಿಗೆ ಸರಿಯಾದ ಎಚ್ಚರಿಕೆಯನ್ನು ಕೊಡದಿದ್ದರೆ ಪರಿಸ್ಥಿತಿ ಇನ್ನೂ ಉಲ್ಬಣವಾಗುತ್ತದೆ. ನಾವು ಏನೂ ಮಾಡುವ ಹಾಗಿಲ್ಲ. ಮೇಯರ್ ಅವರಿಗೂ ಸ್ಥಳೀಯ ಸಚಿವರಿಗೂ ಒಂದು ದೊಡ್ಡ ಯುದ್ಧ ನಡೆಯುತ್ತಿದೆ. ಕಾರ್ಪೊರೇಷನಿನಲ್ಲಿ ನಡೆದಂಥ ನಿರ್ಣಯವನ್ನು ಸಚಿವರು ತಳ್ಳಿ ಹಾಕುತ್ತಾರೆ. ಸಚಿವರು ಕೆಲವಿಷ್ಟು ಆಜ್ಞೆಗಳನ್ನು ಅವರು ತಳ್ಳಿ ಹಾಕುತ್ತಾರೆ. ರೂಲ್ ೪೭ರ ಪ್ರಕಾರ ಇದುವರೆಗೆ ಹೋದಂಥ ೧೫೫ನೋಟೀಸುಗಳನ್ನು ಕಾರ್ಪೊರೇಷನ್‌ನವರು ರಾಜಾರೋಷವಾಗಿ ತಳ್ಳಿ ಹಾಕಿದ್ದಾರೆ. ಆರೀತಿ ತಳ್ಳಿಹಾಕುವ ಅವಕಾಶವಿಲ್ಲ ತಳ್ಳಿ ಹಾಕಬಹುದಾದರೆ ಕಾರ್ಪೊರೇಷನ್ ಅನ್ನು ಸೂಪರ್ ಸೀಡ್ ಮಾಡುವ ಮಟ್ಟಕ್ಕೆ ಇವರು ಹೋಗುತ್ತಾರೆ ಕಾರ್ಪೊರೇಷನ್‌ನವರು ಏನು ಹೇಳುತ್ತಾರೆ ಎಂದರೆ ''ಅವರು ಯಾರು ನೋಟೀಸ್ ಕಳುಹಿಸುವುದಕ್ಕೆ, ? ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡುತ್ತೇನೆ ನಮ್ಮ ಸಭೆಯನ್ನು ಸೂಪರ್‌ಸೀಡ್ ಮಾಡುವುದಕ್ಕೆ ಅವರಿಗೆ ಏನು ಅಧಿಕಾರ ಇದೆ ? " ಎಂದು ಏನು ಏನೂ ಕೆಲವು ಪದಗಳನ್ನು ಉಪಯೋಗಿಸಿದರೂ ಆ ಪದಗಳು ಪತ್ರಿಕೆಯಲ್ಲಿ ಬಂದಿಲ್ಲ. ಎರಡು ಗಂಟೆ ನಡೆದಂಥ ಚರ್ಚೆಯೂ ರಿಕಾರ್ಡು ಕಾರ್ಪೊರೇಷನ್‌ನಲ್ಲಿದೆ. ಟೇಪ್‌ರಿಕಾರ್ಡು ಇದೆ, ಕೂಡಲೆ ಅದನ್ನು ಇಲ್ಲಿಗೆ ತರಿಸುವುದಕ್ಕೆ ವ್ಯವಸ್ಥೆ ಮಾಡಬೇಕು, ಇಲ್ಲದಿದ್ದರೆ ಅದನ್ನು ಕಂಪ್ಲೀಟ್‌ಆಗಿ ಅಳಿಸಿ ಹಾಕತಕ್ಕ ವ್ಯವಸ್ಥೆಯೂ ಇದೆ. ಟೇಪ್ ರಿಕಾರ್ಡರ್ ಮತ್ತು ಅಲ್ಲಿ ಇರತಕ್ಕ ಸ್ಟೆನೋ ಏನು ಬರೆದುಕೊಂಡಿದ್ದಾರೆ ಆ ನೋಟನ್ನು ತರಿಸುವುದಕ್ಕೆ ಆಜ್ಞೆ ಮಾಡಬೇಕು.

† ಶ್ರೀ ಕೆ. ಎಂ ನಾಗಣ್ಣ — (ಚಿಕ್ಕಪೇಟೆ) : ಈ ಜಿಜ್ಞಾಸೆ ಬಂದಿದ್ದಕ್ಕೆ ಕಾರಣ, ಶ್ರೀಮಾನ್ ಶಾಮಣ್ಣನವರು ಕಾರ್ಪೊರೇಷನ್ ಸದಸ್ಯರಿಗೆ, ಶಾಸನ ಸಭೆಯ ಸದಸ್ಯರಿಗೆ ಯಾವ ರೀತಿ ಸಂಬಾವನೆ ಕೊಡುತ್ತಾರೋ ಆದೇರೀತಿ ಅವರಿಗೂ ಸಂಬಾವನೆ ಕೊಡಬೇಕು ಎನ್ನುವ ತರಾವನ್ನು ಅವರು ಮಂಡಿಸಿದಾಗ ನಾನು ಅದಕ್ಕೆ ವಿರೋಧ ಮಾಡಿದ್ದರಿಂದ ಶಾಸನಸಭೆಯ ಸದಸ್ಯರಿಗೆ ಕೊಡತಕ್ಕ ಸಂಭಾವನೆಗೂ, ಕಾರ್ಪೊರೇಷನ್ ಸದಸ್ಯರಿಗೆ ಕೊಡತಕ್ಕ ಸಂಭಾವನೆಗೂ ವ್ಯತ್ಯಾಸವಿದೆ. ಶಾಸನಸಭೆಯ ಸದಸ್ಯರು ಊರಿಗೆ ಹೋಗಿ ಕೆಲಸ ಮಾಡುತ್ತಾರೆ. ಕಾರ್ಪೊರೇಷನ್ ಸದಸ್ಯರು ೧೦–೫೦ ಗಂಟೆಯಿಂದ ಆರುವರೆ ಗಂಟೆಯವರಿಗೆ ಕೆಲಸ ಮಾಡಬೇಕು ಎನ್ನುವ ಅಗತ್ಯವಿಲ್ಲ. ಕೆಲಸ ಆಗಬೇಕಾದರೆ ಫೋನ್‌ನಲ್ಲಿ ಮಾಡಿಕೊಳ್ಳಬಹುದು. ಸಂಭಾವನೆ ಕೊಡಬೇಕಾದುದು ಇಲ್ಲ. ಈಚೆಗೆ ಹೊಸದಾಗಿ ಸದಸ್ಯರಾಗುವ ಮುನ್ನ ಹ್ಯಾಂಡ್‌ಬಿಲ್ಸ್, ಹಂಚುವುದಕ್ಕೆ ದುಡ್ಡು ಇಲ್ಲದಿದ್ದರೂ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿದ್ದಾರೆ ಎಂದು ನಾನು ಹೇಳಿದ್ದು ಉಂಟು. ಈಗಲೂ ಆ ಮಾತನ್ನು ಹೇಳುತ್ತೇನೆ. ಕಾರ್ಪೊರೇಷನ್ ಸದಸ್ಯರಿಗೆ, ಕಾರ್ಪೊರೇಷನ್ ಅಧಿಕಾರಿಗಳಿಗೆ ನಾನು ಹೇಳಿದ್ದು ತಪ್ಪು, ಸರಿಯಿಲ್ಲ ಎನ್ನುವುದಾದರೆ, ಅವರು ಜಾಗೃತ ಆಯೋಗದ ವಿಚಾರಣೆಗೆ ಒಪ್ಪಿಕೊಳ್ಳಲಿ ಒಂದು ವರ್ಷದೊಳಗೆ ಆಸ್ಪೊಂದು ಹಣ ಸಂಪಾದನೆ ಮಾಡಿ ಹೇಗೆ ಮನೆ ಕಟ್ಟಿದರು, ಅವರಿಗೆ ಕಾರು ಎಲ್ಲಿಂದ ಬಂತು ? ಅವರಿಂದ ವರದಿಯನ್ನು ತರಿಸಿಕೊಳ್ಳಲಿ.

ಶ್ರೀ ಟಿ. ಆರ್. ಶಾಮಣ್ಣ.— ಎಲ್ಲಾ ಕೌನ್ಸಿಲರ್ಸ್ ಎಂದು ಏತಕ್ಕೆ ಹೇಳಿದಿರಿ ?

ಶ್ರೀ ಕೆ. ಎಂ. ನಾಗಣ್ಣ.— ಕೆಲವರು ಎಂದು ಹೇಳಿದೆ. ಈಗಲೂ ಕೆಲವರು ಎಂದು ಹೇಳುತ್ತೇನೆ. ಈ ಸಭೆಯಲ್ಲಿ ನಡೆಸಿದ ಕಾರ್ಯಕಲಾಪಗಳ ಬಗ್ಗೆ ಟೀಕೆ ಮಾಡುವುದಕ್ಕೆ ಕಾರ್ಪೊರೇಷನ್ ಸಭೆಗೆ ಅಧಿಕಾರ ಇದೆಯೇ' ಇಲ್ಲವೇ ಎಂದು ಗಮನಿಸಿ ಸೂಕ್ತ ಎಚ್ಚರಿಕೆ ಕೊಡಬೇಕಾಗಿದೆ ಅದು ತಮ್ಮ ಕರ್ತವ್ಯ. ಮತ್ತೊಮ್ಮೆ ಹೇಳುತ್ತೇನೆ, ಅವರು ನಿಷ್ಪಕ್ಷಪಾತಿಗಳಾಗಿದ್ದರೆ ಅವರಿಗೆ ಧೈರ್ಯ ಇದ್ದರೆ, ಅವರು ಅವ್ಯವಹಾರದಲ್ಲಿ ಸಂಪಾದನೆ ಮಾಡದೆ ಇದ್ದರೆ ಜಾಗೃತ ಆಯೋಗದ ವಿಚಾರಣೆಗೆ ಅವರನ್ನು ಒಳಪಡಿಸಲಿ.

ಶ್ರೀ ಎಂ. ಎಸ್. ಕೃಷ್ಣನ್ :—ರೂಲ್ಸ್ ಆಫ್ ಪ್ರೊಸೀಜರ್ ಆಧಾರದ ಮೇಲೆ ೧೭೯ನೇ ನಿಯಮದ್ ಪ್ರಕಾರ ತಾವು ಇದಕ್ಕೆ ಕಾನ್ಸೆಂಟ್ ಕೊಟ್ಟಿದ್ದೀರಾ ? ೧೭೯ನೇ ನಿಯಮದ ಪ್ರಕಾರ ಅವರು ಸೂಚನೆ ಕಳಿಸಿದ್ದಾರೆ.

ಅಧ್ಯಕ್ಷರು :—ರಿಕಾರ್ಡಿಲ್ಲದೆ ಕನ್ಸೆಂಟ್ ಕೊಡುವುದಕ್ಕಾಗುತ್ತದೆಯೇ ? ಅವರೆಲ್ಲಾ ಹೇಳಿದ್ದಾರೆ. ರಿಕಾರ್ಡ್ ತರಿಸಿ ನೋಡಬೇಕು. ತಾವು ತಿರುಗಿ ಹೇಳಬೇಕಾದ ಅಗತ್ಯ ಕಾಣುತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ .—ಇನ್ನೊಂದು ಮುಖ್ಯ ಪ್ರಶ್ನೆಯಿದೆ, ಅತಿ ಮುಖ್ಯವಾದ ಪ್ರಶ್ನೆ ಮಾನ್ಯ ಸಭೆಯ ಸದಸ್ಯರಿದ್ದಾರೆ. ಕಾರ್ಪೊರೇಷನ್ ಅಧಿಕಾರದ ಬಗ್ಗೆ ಅಥವ ಬೇರೆ ವಿಷಯದ ಬಗ್ಗೆ ಮಾತನಾಡಬಹುದು. ಮಾತನಾಡಲು ಹಕ್ಕಿದೆಯೇ, ಇಲ್ಲವೇ ಎಂಬುದು ಮುಖ್ಯ ಪ್ರಶ್ನೆ. ಇನ್ನು ಯಾರ ಬಗ್ಗೆ ಮಾತನಾಡಿದ್ದಾರೆ ಎಂಬುದು ಇನ್ನೊಂದು ಸಮಸ್ಯೆ. ದೇವೇಗೌಡರು ಮತ್ತು ನಾಗಣ್ಣನವರು ಮಂತ್ರಿಗಳ ಬಗ್ಗೆ ಮಾತನಾಡಿದ್ದಾರೆ, ಪತ್ರಿಕೆಯಲ್ಲಿ ವರದಿ ಆಗಿದೆ. ಮಂತ್ರಿಗಳು ಡಿಫೆಂಡ್ ಮಾಡಿಕೊಳ್ಳುವುದು ಅವರ ಕಾರ್ಯವ್ಯಾಪ್ತಿಗೆ ಬರುವುದಾದರೆ ಅದು ಅವರಿಗೆ ಸೇರಿದ್ದು. ಅದರ ಜೊತೆಗೆ ಪತ್ರಿಕೆಯ ವರದಿ ಪ್ರಕಾರ ಅವರಿಗೆ ಮಾತ್ರ ಅನ್ವಯಿಸುವಂತಿದ್ದರೆ ಅವರು ಡಿಫೆಂಡ್ ಮಾಡಿಕೊಳ್ಳಬಹುದು. ನಾವು ಪ್ರಿವಿಲೇಜ್ ಮೋಷನ್ ತಂದಿರುವುದು ಸದಸ್ಯರ ಬಗ್ಗೆ ಸಹ ಹೇಳಲಾಗಿದೆ ನಾಗಣ್ಣ ಮುಂತಾದವರ ಬಗ್ಗೆ ಸಹ ಹೇಳಲಾಗಿದೆ ಎಂದು. ಇದು ಬಹಳ ಮುಖ್ಯವಾದ ವಿಷಯ. ಇನ್ನೊಂದು ಅಂಶವನ್ನು ತಮ್ಮ ಗಮನಕ್ಕೆ ತರಬೇಕಾದ್ದು ಏನೆಂದರೆ ಇಂಥ ವಿಷಯಗಳನ್ನು ತಿರ್ಮಾನ ಮಾಡುವಾಗ ''ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಆಫ್ ಪಾರ್ಲಿಮೆಂಟ್'' ಎನ್ನುವುದರಲ್ಲಿ ಒಂದು ವಿಷಯ ಹೇಳಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ.

I would like to quote from 'Practice and Procedure of Parliament' by M. N. Kaul and S. L. Shakdher It is like this :—

> "In interpreting these privileges, therefore, regard must be had to the general principle that the privileges of Parliament are granted to members in order that 'they may be able to perform their duties in Parliament without let or hindrance'. They apply to individual members "only in so far as they are necessary in order that the House may freely perform its functions. They do not discharge the member from the obligations to society which apply to him as much and perhaps more in closely that capacity, as they apply to other subjects'."

ಆ ಮೇಲೆ ಒಂದು ಕೇಸನ್ನು ಕೋಟ್ ಮಾಡಿದ್ದಾರೆ. ಅದನ್ನು ನಾನು ಹೇಳುವುದಿಲ್ಲ ಅವರ ತಪಶೀಲು ಹೇಳಬೇಕಾದರೆ ಕಾಲಾವಕಾಶ ಬೇಕು ? So, once a person is not able to perform his duties without let or hindrance and it anything happens inside or outside the House which comes in the way of performing his duties', then it comes a breath of privilege. This is a matter where some hon. Members of the Bangalore Corporation have not only cast aspersions but have spoken in such a serious manner as to prevent us from performing our duties. It is not just a criticism of the members of this House ; it is something more. It is a very serious matter.

''ಹುಚ್ಚರ ಕೈಲಿ ದೊಣ್ಣೆ ಕೊಟ್ಟಹಾಗಿದೆ'' ಎಂದು ಹೇಳುವರು. ಅಂದರೇನು ಅರ್ಥ? ಮರ್ದನ ಮಾಡುತ್ತೇವೆ ಎಂಬ ರೀತಿಯಲ್ಲಿ ಹೇಳಿದ್ದಾರೆಂದು ಕಾಣುತ್ತದೆ. ಆ ರೀತಿ ಪತ್ರಿಕೆಯಲ್ಲಿ ಬಂದಿದೆ. ಪತ್ರಿಕೆ ತರಿಸಿ ನೋಡಬಹುದು ಟೇಪ್‌ರಿಕಾರ್ಡ್ ಮಾಡಿಕೊಳ್ಳುವರೋ ಇಲ್ಲವೋ ಗೊತ್ತಿಲ್ಲ. ಕಾರ್ಪೊರೇಷನ್ನಿನಲ್ಲಿ ಟೇಪ್ ರಿಕಾರ್ಡ್ ಅಳಿಸಬಹುದೋ ಏನೋ. ಈ ರೀತಿ ಹೇಳಿದರೆ ಅರ್ಥವೇನು ? ಇದನ್ನು ನೋಡಿದರೆ ಯಾರೂ ಉಳಿಯುವ ಹಾಗಿಲ್ಲ. ಈ ಅಭಿಪ್ರಾಯ ಬರುವುದು.

SRI H. M. CHANNABASAPPA .—Minister is also a member.

SRI M. S. KRISHNAN.—The Minisiter is capable of defending himself in so many ways, So, I coasider it a breach of privillege of the members of this House and request the Chair that it be referred to the Privillages Committee.

ಶ್ರೀ ವಾಟಾಳ್ ನಾಗರಾಜ್ .—ಮಹಮದ್‌ಬಿನ್ ತೊಗಲಕ್ ಆಡಳಿತವಾಗಿದೆ....

ಶ್ರೀ ಟಿ. ಆರ್. ಶಾಮಣ್ಣ .—ಮಾನ್ಯ ಸಭಾಪತಿಗಳೇ, ನಾನು ಅದೃಷ್ಟವೋ ದುರಾದೃಷ್ಟವೋ ಕಾರ್ಪೊರೇಷನ್ ಸದಸ್ಯ ಮತ್ತು ಈ ಸಭೆಯ ಸದಸ್ಯ ಸಹ ಆಗಿದ್ದೇನೆ. ನಾನು ಕಾರ್ಪೊರೇಷನ್ ಸಭೆಯಲ್ಲಿ ನಡೆದ ಕಾರ್ಯಕಲಾಪಗಳನ್ನು ಮೊದಲಿನಿಂದ ಕೊನೆಯವರೆಗೆ ಕೇಳುತ್ತಿದ್ದೆ. ವಾಟಾಳ್ ನಾಗರಾಜರವರು ಕೊನೆಯಲ್ಲಿ ಬಂದರು. ಆದರೆ ನಾನು ಇಲ್ಲಿಯ ಸದಸ್ಯನಾಗಿ ಅಲ್ಲಿ ಈ ಸಭೆಯ ಬಗ್ಗೆ ಟೀಕೆ ಮಾಡುವುದಕ್ಕೆ ಹಕ್ಕಿಲ್ಲ, ಅದು ನ್ಯಾಯವೂ ಅಲ್ಲ ಎಂದು ಹೇಳುವುದು. ಆದರೆ ಅಲ್ಲಿ ಔಚಿತ್ಯ ಬಿಟ್ಟು ಹೆಚ್ಚಾಗಿ ಚರ್ಚೆಯಾಗಿದೆ ಎಂಬುದನ್ನು ನಾನು ಹೇಳಬಲ್ಲೆ. ಈ ಬಗ್ಗೆ ಕಮಿಷನರ್‌ರವರು ಆರೋಪ ಅಲ್ಲಿ ಮಾಡಿದ್ದರ ಬಗ್ಗೆ ಸಂಬಂಧಪಟ್ಟ ರಿಕಾರ್ಡ್ ಮತ್ತು ಪಾರ್ಟ್‌ಹ್ಯಾಂಟ್ ನೋಟ್ಸನ್ನು ಕೊಡಬೇಕು ಎಂದು ಆದೇಶ ಕೊಟ್ಟರು. ಆದರೆ ಮೇಯರ್‌ರವರು ಕೊಡಬಾರದು, ನಮ್ಮ ರೂಮಿನಲ್ಲಿ ಲಾಕರಿನಲ್ಲಿ ತಂದಿಡಿ ಎಂದು ಹೇಳಿದ್ದಾರೆ. ಆದುದರಿಂದ ಇದು ಸ್ವಲ್ಪ ಅತಿರೇಕಕ್ಕೆ ಹೋಗಿದೆ. ಹಿಂದೆ ಹೀಗೆ ಮಾಡಿ ನಿರ್ಣಯವಾಗಿದಿರುವುದು ಆಗಿದೆ ಎಂದು ನಾನು ಆರೋಪ ಮಾಡಿದ್ದೇನೆ. ರೆಸಲ್ಯೂಷನ್ ಪಾರ್ಟ್‌ಹ್ಯಾಂಡ್ ರಿಪೋರ್ಟ್‌ನಲ್ಲಿಲ್ಲ ಬೀರುವಿನಲ್ಲಿಡಿ ಎಂದು ಆದೇಶ ಕೊಟ್ಟಿರುವುದರಿಂದ ಹೇಗೆ ಬೇಕಾದರೂ ಆಗಬಹುದು. ಆದುದರಿಂದ ಇದರ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ವಾಸ್ತವಾಂಶ ಹೊರಗೆ ಬರುವುದಿಲ್ಲ, ಇದಾಗಬಾರದು ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

SRI H. M. CHANNABASAPPA.—Madam, a very important of privilege has been raised by the hon. Member Sri Deve Gowda. There are two things. One is the powers and privileges of the members of this House and the other is the powers and privileges and the freedom of a common citizen. These two things will have to be weighed very carefully ; It is a constitutional issue also. Certain powers and privileges of a member are adumbrated in article 194 (2) of the Constitution.

SRI T. R. SHAMANNA .—In the Corporation Supplementary regulation there is a provision that any issue that is raised in the Corporation should not be derogatory to the authority of Parliament or of a Legislature.

SRI H. M. CHANNABASAPPA .—I am not making any comments. This is an important issue which has to be gone into very carefully not only by members but also people well versed in constitutional law. There are certain freedoms we enjoy. Similarly private citizens corporators also form part of citizens have also certain rights to comment on the performance of the Government performance of individual ministers. But to what extent they can go, is a matter which requires to be examined. We have to see what is the limit for reasonable comment and whatever comments people do outside will have to be within certain reasonable limits. If the public or any citizen or any corporator cannot at all comment on Government, then the Government will not be subject to any criticism from an individual outside and similary what applies to Ministers will apply to members.

ಶ್ರೀ ಎಚ್. ಡಿ. ದೇವೇಗೌಡ .—ನನಗೆ ಮಾತ್ರಿಗೆಯಿಂದ ಒಂದು ಕ್ಲಾರಿಫಿಕೇಷನ್ ಬೇಕು. ಮಾನ್ಯ ಚನ್ನಬಸಪ್ಪನವರು ಬೆಂಗಳೂರಿನಲ್ಲಿರುವಂತೆ ಅಲಸೂರಿನಲ್ಲಿ ಮೂರು ಕೋಟಿ ರೂಪಾಯಿಗಳನ್ನು ಹೊಡೆದರು ದುಡ್ಡನ್ನು ಹೊಡೆದರು ಎಂದು ಹೊರಗಡೆ ಹೇಳುವುದಕ್ಕೂ ಇಲ್ಲಿ ಈ ಸದನದಲ್ಲಿ ಒಂದು ಹೇಳಿಕೆ ಮಾಡುವುದಕ್ಕೂ ವ್ಯತ್ಯಾಸವಿಲ್ಲವೇ ?

SRI H. M. CHANNABASAPPA :—The matter pertaining here is whether there was improper motivation or not and it requires to be examined. So, what I would submit is that this matter be given adequate thought at your level and after considering from all aspects rights of the citizens, rights of the corporators and rights of the members of this House and rights of the Minister I request you may kindly exercise your mind adequately and give a ruling on this. That is my reply.

MADAM SPEAKER :—I shall call for records and taperecorders and look into it.

ಶ್ರೀ ವಾಟಾಳ್ ನಾಗರಾಜ್ .—ಅಲ್ಲಿ ಇದ್ದ ಸಂಗತಿಯನ್ನು ಬದಲಾವಣೆ ಮಾಡತಕ್ಕ ಸಂದರ್ಭ ಇರುವುದರಿಂದ ಅಲ್ಲಿ ಷಾರ್ಟ್ ಹ್ಯಾಂಡ್ ನೋಟ್ ಬುಕ್ಕನ್ನು ಮಾನ್ಯ ಅಧ್ಯಕ್ಷರು ಈ ದಿವಸವೇ ತರಿಸಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಲ್ಲ ಛೇಂಜ್ ಮಾಡುವುದಕ್ಕೆ ಅವಕಾಶವಿರುವುದರಿಂದ ಬೇಗ ತರಿಸಿಕೊಳ್ಳಿ ನಿಧಾನ ಮಾಡಬೇಡಿ ಏಂದು ಕೇಳಿಕೊಳ್ಳುತ್ತೇನೆ.

Re : Allagation made on a Minister by the Brahmana Taruna Samaj, Bagalkote.

ಶ್ರೀ ಎಚ್. ಡಿ. ದೇವೇಗೌಡ .—ನಮ್ಮ ನಿಯಮಾವಳಿಗಳಲ್ಲಿ ಹೇಳಿರತಕ್ಕ ರೂಲ್ ೩೧೧ರ ಪ್ರಕಾರ ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರ ಬಗ್ಗೆ ಅವರು ಬಾಗಿಲುಕೋಟೆಗೆ ಹೋಗಿದ್ದಾಗ ಬ್ರಾಹ್ಮಣ ಸಮಾಜದ ಮೇಲೆ ನಿಂದನೆ ಮಾಡಿದರೆಂದು ನನಗೆ ಒಂದು ವರದಿ ಬಂದಿದೆ. ಅದರ ವಿಚಾರದಲ್ಲಿ ಅಧ್ಯಕ್ಷರ ಅಪ್ಪಣೆ ಪಡೆದು ಕೆಲವು ವಿವರಗಳನ್ನು ನಾನು ಸರ್ಕಾರದಿಂದ ಪಡೆಯಬೇಕಾಗಿದೆ. ಈ ಒಂದೂ ವಿಚಾರ ಮುಖ್ಯಮಂತ್ರಿಗಳಿಲ್ಲ ಎಂದು ಕಳೆದ ೧೫ ದಿನಗಳಿಂದಲೂ ಹಾಗೇ ತಳ್ಳಿಕೊಂಡು ಬರುತ್ತಿದೆ.

ವಿಷಯ ಏನೆಂದರೆ .—"ತಾ ೨೭ನೇ ಸೆಪ್ಟಂಬರ್ ೧೯೭೨ರಲ್ಲಿ ಮಾನ್ಯ ಮಂತ್ರಿಗಳ ಬಗ್ಗೆ ಯಾರೂ ಒಂದು ಆರೋಪಣೆಯನ್ನು ಮಾಡಿದ್ದರೂ ಅವರ ಬಗ್ಗೆ ಮೈಸೂರು ಸರ್ಕಾರದವರು ಒಂದು ಡೆಫಮೇಷನ್ ಕೇಸ್ ಹಾಕಬೇಕೂ ಎಂಬುದಾಗಿ ತೀರ್ಮಾನವಾಗಿದೆ" ಎಂದು ಅನೇಕ ಪತ್ರಿಕೆಗಳಲ್ಲಿ ವರದಿಯಾಗಿದೆ. ಯಾರು ಮಂತ್ರಿಗಳ ಬಗ್ಗೆ ಹಾಗೆ ಒಂದೂ ನಿಂದನೆಯನ್ನು ಇಲ್ಲವೇ ಅಪಾದನೆಯನ್ನು ವಿನಾ ಕಾರಣ ಮಂತ್ರಿಗಳ ಚಾರಿತ್ರ್ಯಕ್ಕೆ ಒಂದೂ ಭಂಗತರುವುದಕ್ಕಾಗಿ ಅಥವಾ ಕಳಂಕವನ್ನು ತರುವುದಕ್ಕಾಗಿ ಕುತಂತ್ರದಿಂದ ಅಂಥ ಅಪಾದನೆಯನ್ನು ಮಾಡಿದ್ದಾರೆ ಅಂತಹವರ ಬಗ್ಗೆ ಮಾನನಷ್ಟ ಮೊಕದ್ದಮೆಯನ್ನು ಹೂಡಬೇಕಾದ್ದೇ ನ್ಯಾಯ.

ಶ್ರೀ ಎಚ್. ಎಂ. ಚನ್ನಬಸಪ್ಪ .—ಪತ್ರಿಕೆಯಲ್ಲಿ ಯಾರೋ ಏನೋ ಬರೆದಿದ್ದಾರೆ ಎಂದು ಅದಕ್ಕೆ ಇಲ್ಲಿ ನಾನು ಈಗ ಉತ್ತರ ಕೊಡಬೇಕು ಎಂದರೆ ಇದಕ್ಕೆ ನಾನೇನು ಹೇಳಲಿ ?

ಶ್ರೀ ಎಚ್. ಡಿ. ದೇವೇಗೌಡ .—ಶ್ರೀ ಬಸವಲಿಂಗಪ್ಪನವರು ಎಲ್ಲಾ ಪತ್ರಿಕೆಗಳವರನ್ನೂ ಕರೆಸಿ ಅದರಲ್ಲೂ ಮುಖ್ಯವಾದ ಪತ್ರಿಕೆಗಳವರನ್ನು ಕರೆಸಿ ಅವರಿಗೆ ತಾ ೨೭ನೇ ಸೆಪ್ಟಂಬರ್ ೧೯೭೨ರಲ್ಲಿ ಸರ್ಕಾರದವರು ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ ಅದೇನೆಂದರೆ ಆ ಬಾಲು ಕೋಟೆಯಲ್ಲಿರತಕ್ಕ ಬ್ರಾಹ್ಮಣರ ತರುಣರ ಸಮಾಜದ ಮೇಲೆ ಮಾನನಷ್ಟ ಮೊಕದ್ದೊಮೆಯನ್ನು ಹೂಡಿದ್ದಾರೆ ಎಂದು ತಿಳಿಸಿದ್ದಾರೆ. ಅದು ನಿಜವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಅವರು ಪತ್ರಿಕೆಯವರಲ್ಲಿ ಹೇಳಿದ್ದಾರೆ ಹಾಗೆ ಪತ್ರಿಕೆಯಲ್ಲಿ ವರದಿಯಾಗಿದೆ ಎಂದು ಹೇಳಿ ತಾವು ಇಲ್ಲಿ ಈಗ ನನಗೆ ಹೇಳಿದರೆ ನಾನು ಏನು ಮಾಡಬೇಕು ?

ಶ್ರೀ ಎಚ್. ಡಿ. ದೇವೇಗೌಡ .—ಪತ್ರಿಕೆಯಲ್ಲಿ ಒಂದು ಮೇಳೆ ಹಾಗೆ ವಿರುದ್ಧವಾಗಿ ಹೇಳಿಕೆ ಬರುವುದಕ್ಕೆ ಅವಕಾಶ ಇರುವುದಾದರೂ ತಾವು ಅದರ ಬಗ್ಗೆ ಅದರೂ ಹೇಳಬಹುದಲ್ಲವೇ ? ಪತ್ರಿಕೆಯವರು ಬದಲಾಯಿಸಿ ಹೇಳಿಕೆ ಕೊಡುವುದಕ್ಕೆ ಅವರಿಗೂ ಅವಕಾಶವಿದೆ.